

ಮಾಡುತ್ತಾರೆಂದು ಬಂದಿದ್ದ ನೆಂಟರಿಗೆಲ್ಲ ಗೊತ್ತಿತ್ತು. ‘ಇವತ್ತು ಮಣ್ಣು ರಾತ್ರಿಯಾದರೂ ಪರ್ವಾಗಿಲ್ಲ, ನನ್ನ ತವರಿನ ಕಡೆಯವರು ಬರೋವರ್ಗೂ ಹೆಣ ಎತ್ತಂಗಿಲ್ಲ’ ಎಂದು ಪಾರ್ವತಜ್ಜಿಯ ಹಿರಿಯ ಸೊಸೆ ಸುಗ್ರೀವಾಜ್ಞೆ ಹೊರಡಿಸಿದ್ದಳು. ಹಾಗಾಗಿ ಎಲ್ಲರೂ ಇತರೆ ಕೆಲಸಗಳನ್ನೆಲ್ಲ ಮುಗಿಸುತ್ತಾ, ಅವರು ಬರುವ ದಾರಿಯನ್ನು ನೋಡುತ್ತ ಕುಳಿತಿದ್ದರು. ಪಾರ್ವತಜ್ಜಿಯ ಹೆಣವನ್ನು ಅವಳೇ ಕಟ್ಟಿಸಿದ್ದ ದೊಡ್ಡದಾದ ಕಲ್ಲುಮನೆಯ ಮುಂದೆ, ಕೊನೆಯ ದಿನಗಳಲ್ಲಿ ಅವಳು ಮಲಗುತ್ತಿದ್ದ ಹಾಸಿಗೆಯ ಮೇಲೆ ಬೆನ್ನಿಗೆ ಆಸರೆ ಒದಗಿಸಿ ಕೂರಿಸಿದ್ದರು. ಬಂದವರೆಲ್ಲಾ ಪೂಜೆ ಮಾಡಿ, ವಿಭೂತಿ, ಕುಂಕುಮ ಹಚ್ಚಿ, ಅವಳ ಕೊರಳು ತುಂಬುವಷ್ಟು ಹೂ ಹಾರಗಳನ್ನು ಹಾಕಿದ್ದರು.

ಪಾರ್ವತಜ್ಜಿಯನ್ನು ಕೂರಿಸಿದ್ದ ಸ್ಥಳದಿಂದ ಸ್ವಲ್ಪ ದೂರದಲ್ಲಿ ಮನೆಯ ಮುಂದಿರುವ ಮರಕ್ಕೆ ಒರಗಿಕೊಂಡು, ಅಲ್ಲಿಂದಲೇ ಇಲ್ಲಿ ನಡೆಯುತ್ತಿದ್ದ ಅಳು, ಕೂಗಾಟ, ಪೂಜೆ, ಅಜ್ಜಿಯ ಹೊಗಳುವಿಕೆ ಇತ್ಯಾದಿ ನಾಟಕಗಳನ್ನೆಲ್ಲಾ ನೋಡುತ್ತಾ ನಿಂತಿದ್ದ ಶಂಕರನಿಗೆ